# ಬಿಂದಾಸ್ ಬಿಪಾಸಾ

**ಬಿ**ಪಾಸಾ ಬಸು ಮದುವೆ ಯಾವಾಗ? ಆಕೆ ಗುಟ್ಟಾಗಿ ಯಾರನ್ನೋ ಪ್ರೀತಿಸುತ್ತಿದ್ದಾಳೆಯೆ?

–ಬಾಲಿವುಡ್‌ನ ಗುಪ್ತಚರರು ಈ ಪ್ರಶ್ನೆಗಳನ್ನು ಮುಂದಿಟ್ಟುಕೊಂಡು ಏನೇ ಗೂಢಚರ್ಯೆ ಮಾಡಿದರೂ ಬಿಪಾಸಾ ಡೋಂಟ್ ಕೇರ್ ಶೈಲಿಯಲ್ಲೇ ನಗುತ್ತಿದ್ದಾಳೆ. 'ಅದಕ್ಕೆಲ್ಲ ಅಷ್ಟು ಯಾಕೆ ತಲೆ ಕೆಡಿಸಿಕೊಳ್ತೀರಿ. ಮದುವೆ ಆಗುವಾಗ ನಿಮಗೆಲ್ಲ ಹೇಳಿಯೇ ಆಗ್ತೇನೆ. ನಾನು ಯಾರನ್ನೂ ಗುಟ್ಟಾಗಿ ಪ್ರೀತಿಸುತ್ತಿಲ್ಲ ಎಂದು ನಿಮಗ್ಯಾರು ಹೇಳಿದರು?' ಎಂದು ಬಿಪಾಸಾ ಬಹಿರಂಗವಾಗಿ ಸಂದರ್ಶನವೊಂದರಲ್ಲಿ ಹೇಳಿ ಪತ್ರಕರ್ತರನ್ನು ಇನ್ನಷ್ಟು ಫಜೀತಿಗೆ ಸಿಲುಕಿಸಿದ್ದಾರೆ. 'ಆ ಹುಡುಗ ಯಾರೂಂತ ಹೇಳಿ ಮೇಡಂ?' ಎಂದು ಪ್ರಶ್ನಿಸಿದರೆ, 'ಅದನ್ನೂ ಸಮಯ ಬಂದಾಗ ಹೇಳುತ್ತೇನೆ' ಎಂದು ಕೆನ್ನೆಯಲ್ಲಿ ಗುಳಿ ಬೀಳುವಂತೆ ನಕ್ಕಿದ್ದಾಳೆ.

"ನನಗೆ ಎಂತಹ ಪುರುಷ ಬೇಕು ಎಂದು ಕೇಳಿದರೆ ನನ್ನ ಉತ್ತರ ಸ್ಪಷ್ಟವಿದೆ. ಆತ ನನ್ನ ಬಗ್ಗೆ ಹೆಮ್ಮೆ ಹೊಂದಿರಬೇಕು. ಆತ ಅಗತ್ಯ ಬಿದ್ದರೆ ಒಂದು ಹೆಜ್ಜೆ ಹಿಂದೆ ಸರಿದು ನಾನು ಮಿಂಚಲು ಅವಕಾಶ ಮಾಡಿಕೊಡುವವನೂ ಆಗಿರಬೇಕು. ನನ್ನನ್ನು ಹಿಂದಕ್ಕೆ ತಳ್ಳುವವನು ಆಗಿರಬಾರದು. ನಾನು ಹೇಗೆ ಇದ್ದೀನೋ, ಹೇಗೆ ಮಾತನಾಡುತ್ತೀನೋ, ನನ್ನ ಕೆಲಸಗಳನ್ನು ಹೇಗೆ ಮಾಡಿಕೊಳ್ಳುತ್ತೀನೋ ಅದೆಲ್ಲವನ್ನೂ ಆತ ಅದೇ ರೀತಿಯಲ್ಲಿ ಸ್ವೀಕರಿಸುವ ಮನೋಭಾವ ಹೊಂದಿರಬೇಕು. ನಾನು ಇರೋದೇ ಹೀಗೆ. ಬಹಳ ಮುಕ್ತ, ಬಿಂದಾಸ್! ನಾನು ಏನಾಗಿದ್ದೇನೋ ಅದನ್ನು ಮೆಚ್ಚಿಕೊಂಡು ಆತ ನನ್ನ ಜತೆಗೆ ಬಾಳಲು ಸಿದ್ಧನಿರಬೇಕು" ಎನ್ನುವುದು ಬಿಪಾಸಾಳ ಬಿಂದಾಸ್ ಮಾತು.

ಬಿಪಾಸಾಳನ್ನು ಮದುವೆಯಾಗಲು ಯಾರು ತಯಾರಿದ್ದಾರೋ ಗೊತ್ತಿಲ್ಲ. ಆದರೆ ಆಕೆಯ ಗೆಳೆಯರಾಗಲು ಬಾಲಿವುಡ್‌ನಲ್ಲಿ ಹೀರೊಗಳ ದೊಡ್ಡ ಕ್ಯೂ ಇದೆ ಎನ್ನುವುದಂತೂ ನಿಸ್ಸಂಶಯ.





## ಚಿತ್ರಾ-ಹಿಂಸೆ?

**'ದೆ**ಹಲಿಯ ಖಾಸಗಿ ಬಸ್‌ಗಳಲ್ಲಿ ನೀವು ಓಡಾಡುವಂತೆಯೇ ಇಲ್ಲ. ನಾನು ವಿದ್ಯಾರ್ಥಿನಿಯಾಗಿದ್ದಾಗಲೂ ಲೈಂಗಿಕ ಕಿರುಕುಳವನ್ನು ಅನುಭವಿಸಿದ್ದೇನೆ. ಹೆಂಗಸರ ಮೇಲೆ ಗಂಡಸರು ದೌರ್ಜನ್ಯ ನಡೆಸುವುದಕ್ಕೆ ಸಾವಿರಾರು ವರ್ಷಗಳ ಇತಿಹಾಸವೇ ಇದೆ. ಈ ದೌರ್ಜನ್ಯವನ್ನು ಸಹಿಸಬಾರದು'– ಇದು ಕಳೆದ ಡಿಸೆಂಬರ್ ದೆಹಲಿ ಅತ್ಯಾಚಾರ ಪ್ರಕರಣದ ಸಂದರ್ಭದಲ್ಲಿ ಚಿತ್ರಾಂಗದಾ ಸಿಂಗ್ ಆಡಿದ ಕಟು ನುಡಿಗಳು.

ಇದೀಗ ಚಿತ್ರಾಂಗದಾ ಸಿಂಗ್ ಮನೆಯಿಂದಲೇ ಒಡಕು ಸುದ್ದಿಯೊಂದು ಗಟ್ಟಿಯಾಗಿ ಕೇಳಿಬರುತ್ತಿದೆ. 'ಚಿತ್ರಾಂಗದಾ ಸಿಂಗ್ ಕುಟುಂಬ ಜೀವನದಲ್ಲಿ ಒಡುಕುಂಟಾಗಿದೆ. ಆಕೆ ಮನೆ ಬಿಟ್ಟು ಹೊರಟು ಹೋಗಿದ್ದಾಳೆ' ಎನ್ನುವುದೇ ಆ ಸುದ್ದಿ. 'ಚಿತ್ರಾಂಗದಾ ಪತಿ ರಾಂಡವಾ ಆಕೆಯ ಜನಪ್ರಿಯತೆಯನ್ನು ಸಹಿಸಿಕೊಳ್ಳುತ್ತಿಲ್ಲ' ಎಂದು ಒಂದು ವಾದವಾದರೆ, 'ಚಿತ್ರಾಂಗದಾಳ ಬಿಡುಬೀಸಿನ ನಡವಳಿಕೆಯೇ ಒಡಕುಂಟು ಮಾಡಿದೆ' ಎನ್ನುವುದು ಇನ್ನೊಂದು ವಾದ. ಚಿತ್ರಾಂಗದಾಳಿಗೆ ನಿಯಮಿತವಾಗಿ ತನ್ನ ಮಗನನ್ನು ನೋಡಲೂ ಆಕೆಯ ಪತಿ ಬಿಡುತ್ತಿಲ್ಲವಂತೆ. ಸಿನಿಮಾ ನಟಿಯರಿಗೆ ವೃತ್ತಿಜೀವನ ಮತ್ತು ಕುಟುಂಬ ಎರಡನ್ನೂ ತೂಗಿಸಿಕೊಂಡು ಹೋಗುವುದು ದೊಡ್ಡ ಅಗ್ನಿಪರೀಕ್ಷೆ ಎನ್ನುವುದಂತೂ ನಿಜವೇ.

■ ಬಿಂದು